# ವ್ಯಾಖ್ಯಾನ - ಸಲ್ಲದೋ ಕೃಷ್ಣ ಸಲ್ಲದೋ

**Ref.**: Dasara Maatina Sobagu, by Dr. Vijayendra R Desai, page No. 163.

ಸಲ್ಲದೋ ಕೃಷ್ಣ ಸಲ್ಲದೋ ಸಿರಿ
ವಲ್ಲಭ ಇದ ನೋಡು ಪಾಲಿಸಬೇಕೋ || ಪ ||

ಬಿತ್ತಿ ಬೆಳೆಸಿ ತಲೆಯೆತ್ತಿದ ಪೈರನು
ಮತ್ತೆ ತುರುವಿಂಡನು ಬಿಟ್ಟು ಮೆಲ್ಲಿಸುವುದು || 1 ||

ಸಾವಿರ ಹೊನ್ನಿಕ್ಕಿ ಸದನವ ಸಾಧಿಸಿ
ಪಾವಕನುರಿಗೆ ನೀನೊಪ್ಪಿಸಿ ಕೊಡುವುದು || 2 ||

ಕುಶಲದಿ ಬಣ್ಣಿಸಿ ಬರೆದು ಚಿತ್ತಾರವ
ಮಸಿ ಮಣ್ಣ ಮಾಡಿ ನೀ ಕೆಡಿಸುವುದು || 3 ||

ಬಲುಕಾಲ ಮುದ್ದಿಸಿ ಕಲಿಸಿ ಮಾತುಗಳನು
ಗಿಳಿಯ ಸಾಕಿ ಬಾವುಗಗೆ ಒಪ್ಪಿಸುವುದು || 4 ||

ಕರುಣಿಸು ಸಿರಿ ಪುರಂದರ ವಿಠಲ ನಮ್ಮ
ಹಿರಿದು ಮಾಡಿ ಮತ್ತೆ ಕಿರಿದು ಮಾಡುವುದು || 5 ||

# ವ್ಯಾಖ್ಯಾನ

ಮುಖ್ಯವಾಗಿ ನೆನಪಿಡಬೇಕು – ಪರಮಪುರುಷ ಶ್ರೀ ಕೃಷ್ಣ. ಸೃಷ್ಟಿ, ಸ್ಥಿತಿ, ಲಯ, ಜ್ಞಾನ, ಅಜ್ಞಾನ, ಬಂಧ, ಮೋಕ್ಷ - ಇವುಗಳನ್ನು ಜಗತ್ತಿಗೆ ಕೊಡುವವನು ಅವನೇ.

೧) ಹೊಲ ಹದ ಮಾಡುವದು. ಬೀಜ ಬಿತ್ತುವದು. ಬೆಳೆ ಬೆಳೆಯುತ್ತದೆ. ತೆನೆ ತಲೆ ಎತ್ತಿ, ಪೈರು ಕಂಗೊಳಿಸುತ್ತದೆ. ಬೆಳೆದ ಮಾಲಕ, ರೈತ ಸುಗ್ಗಿ ಮಾಡಬೇಕು. ಸಂಭ್ರಮಿಸ ಬೇಕು.

ಇಲ್ಲಿ ಏನಾಗಿದೆ?

ತನ್ನ ಹೊಲದಲ್ಲಿ, ಬೆಳೆದು ನಿಂತ ಬೆಳೆಯ ಮಧ್ಯೆ ದನದ ಹಿಂಡು ಮಾಲಕ ತಾನೇ ಬಿಡುತ್ತಾನೆ. ದನ ಮೇಯಿಸುತ್ತಾನೆ. ಬೆಳೆ ನಾಶ ಮಾಡುತ್ತಾನೆ. ಕಿಂಚಿತ್ತೂ ಪರಿತಾಪವಿಲ್ಲ.

ತಾನೇ ಬಿತ್ತಿ ಬೆಳೆದ ಬೆಳೆ ನಾಶ ಮಾಡುವದರಲ್ಲಿ ಏನು ಸಾರ್ಥಕ್ಯ?

೨) ಅಪಾರ ಧನ ವಿನಿಯೋಗಿಸುತ್ತಾನೆ. ಸಂಭ್ರಮದಿ ಉಪ್ಪರಿಗೆಯ ಮನೆ ಕಟ್ಟಿಸುತ್ತಾನೆ. ಯಜಮಾನ ತಾನೇ ಅದನ್ನು ಅಗ್ನಿಗೆ ಆಹುತಿ ಕೊಟ್ಟು ಇತಿಶ್ರೀ ಹೇಳುತ್ತಾನೆ. ಮನೆ ಹೊತ್ತಿ ಉರಿದರೂ ಈತ ಆನಂದಮಯ! ಕಟ್ಟಿಸಿ ನಾಶ ಮಾಡುವದು ಯಾತಕ್ಕೆ?

ಏನು ಸ್ವಾರಸ್ಯ ಇಲ್ಲಿ?

೩) ಸುಂದರ ಚಿತ್ತಾರ - ಚಿತ್ರ ಬರೆಯುತ್ತಾನೆ. ಬಹು ಕೌಶಲ್ಯದಿ. ಬಹು ಬಣ್ಣದಿ. ಶ್ರೇಷ್ಠ ಕೃತಿ ಅದು. ಪ್ರಕೃಷ್ಟ ಕೃತಿ - ಪ್ರಕೃತಿ ಅದು. ಅದ್ವಿತೀಯ ಚಿತ್ರ. ಚಿತ್ರಿಸಿ ಮುಗಿಯಿತು.

ಆಶ್ಚರ್ಯ! ಬರೆದವನೇ ಅದರ ಮೇಲೆ ಮಶಿ ಮಣ್ಣು ಚೆಲ್ಲಿ ನಾಶ ಮಾಡುತ್ತಾನೆ, ಮತ್ತೆ ತಾನೇ ಆನಂದಿಸುತ್ತಾನೆ!

೪) ಗಿಳಿ ಸಾಕುತ್ತಾನೆ. ಮುದ್ದಿಸಿ ಬೆಳೆಸುತ್ತಾನೆ. ಬೆಳೆಸಿದ ಗಿಳಿಯ ಬಾವುಗನ ಬಾಯಿಗೆ ಕೊಡುತ್ತಾನಲ್ಲ! ದುಃಖವೇ ಇಲ್ಲವಲ್ಲ ಈತನಿಗೆ!

ಹೌದು, ಆತ ಪರಮಾತ್ಮ. ಆತನಗಿಲ್ಲ ದುಃಖ ದುಮ್ಮಾನಾದಿ ದೋಷಗಳು. ಸದಾ ಸುಖಮಯ, ಆನಂದಮಯ. ಆತ ಪರಿಪೂರ್ಣ. ಅವಿಕಾರಿ. ಅಚಲ. ಸರ್ವೋತ್ತಮ.

ಶ್ರೀ ಮನ್ನಾರಾಯಣ, ಜೀವರ ಉದ್ಧಾರ ಮಾಡ ಬಯಸುತ್ತಾನೆ. ಅವರನ್ನು ಸೃಷ್ಟಿಗೆ ತರಲು ಇಚ್ಛಿಸುತ್ತಾನೆ.

ಪ್ರಕೃತಿಯನ್ನು ತರುತ್ತಾನೆ. ಇಂಥ ಹೊಲವನ್ನು ಜೀವಿಗಳೆಂಬ ಬೀಜ ಬಿತ್ತಲು ಹದಮಾಡುತ್ತಾನೆ

ಪ್ರಕೃತಿಯ ಉಪಯೋಗಿಸುತ್ತಾನೆ. ಜೀವಿಗಳಿಗಾಗಿ ಹದಿನಾಲ್ಕು ಮಜಲಿನ ಬಹು ಮಹಡಿ ಮನೆ ಕಟ್ಟುತ್ತಾನೆ.

ಇದೇ ಬ್ರಹ್ಮಾಂಡ. ಅದ್ವಿತೀಯ. ಮತ್ತಾರೂ ಕಟ್ಟಲಸಾಧ್ಯ.

ಈ ಬ್ರಹ್ಮಾಂಡ ಪರಮಾತ್ಮನ ಶ್ರೇಷ್ಠ ಕೃತಿ. ಹದಿನಾಲ್ಕು ಲೋಕಗಳು. ನದಿ, ಪರ್ವತ, ಗುಡ್ಡ, ಬೆಟ್ಟ, ಸಮುದ್ರ, ಗಿಡ, ಮರ ಸರ್ವೋಪಯುಕ್ತ ವಸ್ತುಗಳು. ಭಗವಂತನ ಬಹು ಸುಂದರ ಚಿತ್ತಾರ. ಬಣ್ಣ ಬಣ್ಣಗಳಿಂದ ಚಿತ್ರಿಸಿದ್ದು.

ಇಂಥ ಬ್ರಹ್ಮಾಂಡದಲ್ಲಿ ಸಕಲ ಜೀವಿಗಳನ್ನು ಸೃಷ್ಟಿಗೆ ತರುತ್ತಾನೆ.

ಜೀವಿಗಳ ಸ್ವರೂಪ ಅಣು ಗಾತ್ರ ಮಾತ್ರ. ಪರಮಾತ್ಮ ಸ್ಥೂಲ ದೇಹ ಕೊಡುತ್ತಾನೆ. ನಮ್ಮನ್ನು ಹಿರಿದು ಮಾಡುತ್ತಾನೆ.

ಸಂಸಾರದಲ್ಲಿ ತಂದು, ಹುಟ್ಟು ಸಾವುಗಳ ಚಕ್ರದಲ್ಲಿ ಸಿಗಿಸಿ, ಕರ್ಮ ಮಾಡಿಸಿ, ಫಲ ಭೋಗಿಸಿಸಿ, ಅವರವರ ಯೋಗ್ಯತಾನುಸಾರ ಗತಿ ಕೊಡಲು, ಜ್ಞಾನ ಭಕ್ತಿ ಇಟ್ಟು ಕೊಟ್ಟು ಬೆಳಿಸಿ, ಕರುಣೆಯಿಂದ, ಪ್ರೀತಿಯಿಂದ, ಬಗೆ ಬಗೆಯ ಜೀವಿಗಳ ಬಗೆ ಬಗೆಯ ಸಾಧನೆ ಮಾಡಿಸುತ್ತಾನೆ. ಇದೇ ಗಿಳಿಯನ್ನು ಮುದ್ದಿಸಿ ಬೆಳೆಸುವದು.

ಈಗ ಪೈರು ಬೆಳೆದಿದೆ. ತೆನೆ ಬಿಟ್ಟಿದೆ. ಈ ಪೈರನ್ನು ಹಾಗೇ ಇಟ್ಟು ಕೂಡುವದೇ? ಕಟಾವು ಮಾಡ ಬೇಕು. ಧಾನ್ಯ ಸಂಗ್ರಹಿಸ ಬೇಕು. ಆಗ ಸಾರ್ಥಕ್ಯ.

ಪ್ರಳಯ ಕಾಲ ತರುತ್ತಾನೆ. ತಾನೇ ನಿರ್ಮಿಸಿದ ಬಹು ಮಹಡಿ ಮನೆ - ಬ್ರಹ್ಮಾಂಡವನ್ನು ಪ್ರಳಯಾಗ್ನಿಗೆ ಆಹುತಿ ಕೊಡುತ್ತಾನೆ. ಬೆಳೆಸಿದ ಗಿಳಿಯನ್ನು ಬೆಕ್ಕಿನ ಬಾಯಿಗೆ ಕೊಟ್ಟಂತೆ.!

ಬೆಳೆದುನಿಂತ ಬೆಳೆಯಲ್ಲಿ ದನದ ಹಿಂಡು ಬಿಟ್ಟು ನಾಶ ಮಾಡಿದಂತೆ. ಬರೆದ ಚಿತ್ರ ಮಸಿ ಚೆಲ್ಲಿ ಕೆಡಿಸಿದಂತೆ.! ಇದೆಲ್ಲಾ ಮಾಡುವದು - ಜೀವಿಗಳ ಉದ್ಧಾರಕ್ಕಾಗಿಯೇ. ಅಂದಮೇಲೆ ನಿರ್ದುಃಖನಾದ ಭಗವಂತನಿಗೆ ದುಃಖ ಯಾಕೆ?

ಜೀವಿಗಳ ಸ್ಥೂಲ ದೇಹ, ಲಿಂಗದೇಹ - ಹಿರಿದು ನಾಶ ಪಡಿಸುತ್ತಾನೆ. ಕಿರಿದು – ಅಣು ಗಾತ್ರದ ಸಚ್ಚಿದಾನಂದ ಮಯ ಸ್ವರೂಪ ಅಭಿವ್ಯಕ್ತಿ ಮಾಡುತ್ತಾನೆ. ಇದೇ ಸಿರಿ ಪುರುಂದರ ವಿಠ್ಠಲ ನಮ್ಮನ್ನು ಹಿರಿದು ಮಾಡಿ ಕಿರಿದು ಮಾಡುವ ಉಪಕಾರದ ಪರಿ. ಅಪಾರ ಕರುಣೆಯ ಸಿಂಚನ. ಮಹದುಪಕಾರ

ಮಾಡುವ, ಕರುಣಾ ಸಾಗರ, ಮುಖ್ಯಪ್ರಾಣಾಂತರ್ಗತ  ಲಕ್ಷ್ಮೀ ರಮಣ ಪುರುಂದರ ವಿಠಲನಿಗೆ ಸಹಸ್ರ ಸಹಸ್ರ ಶಿರಸಾ ನಮಿಸೋಣ

ಡಾ. ವಿಜಯೇಂದ್ರ ದೇಸಾಯಿ

ಶ್ರೀ ಕೃಷ್ಣಾರ್ಪಣಮಸ್ತು